ವ್ಯವಹಾರಿಕ ನ್ಯಾಯಾಧೀಶರು (ಹಿ.ಶ್ರೇ) ಮತ್ತು ಪ್ರ.ದ.ನ್ಯಾ.ದಂ.ಗಳವರ ನ್ಯಾಯಾಲಯ,

ಪಿರಿಯಾಪಟ್ಟಣ.

ಸಿ.ಸಿ.ನಂ.13/2017

| | | |
|---|---|---|
| ಪಿರ್‍ಯಾದುದಾರರು | ಃಃ | ಬೈಲುಕುಪ್ಪೆ ಪೋಲಿಸ್ ಠಾಣೆ |
| | | -ವಿ- |
| ಆರೋಪಿ | ಃಃ | ಆರ್.ಎಸ್.ದೊಡ್ಡಣ್ಣ ಬಿನ್ ಲೇಟ್. ಸಿದ್ಧಯ್ಯ<br>ವಯಸ್ಸು ಃ 55 ವರ್ಷಗಳು, ಧರ್ಮದರ್ಶಿ,<br>ಮಿಳಿಂದ ವಿದ್ಯಾಸಂಸ್ಥೆ ಗಿರಗೂರು,<br>ಪಿರಿಯಾಪಟ್ಟಣ ತಾಲ್ಲೋಕು. |

## ದೋಷಾರೋಪಣೆ

ನಾನು ಅರ್ಜುನ್ ಎಸ್.ಮಳ್ಳೂರ್., ಬಿ.ಎ.ಎಲ್, ಎಲ್‌ಎಲ್‌ಬಿ, ಹಿ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ, ಪಿರಿಯಾಪಟ್ಟಣ ಈ ಕೆಳಕಂಡಂತೆ ನಿಮ್ಮ ಮೇಲೆ ಆರೋಪಿಸಲಾಗಿದೆ

ಆರೋಪಿಯಾದ ನೀನು ಮಿಳಿಂದ ವಿದ್ಯಾಸಂಸ್ಥೆಯ ಧರ್ಮದರ್ಶಿಯಾಗಿ ನೇಮಕಗೊಂಡಿದ್ದು ಸದರಿ ವಿದ್ಯಾಸಂಸ್ಥೆಯ ಹಣಕಾಸಿನ ವ್ಯವಹಾರದ ಜವಾಬ್ದಾರಿಯನ್ನು ತಮಗೆ ವಹಿಸಿದ್ದು ದಿನಾಂಕಃ 01-06-1990 ರಿಂದ 09-12-2009ರ ನಡುವಿನ ಅವಧಿಯಲ್ಲಿ ತಮ್ಮ ಸ್ಥಾನವನ್ನು ದುರುಪಯೋಗ ಮಾಡಿಕೊಂಡು ದಾನಿಗಳಿಂದ ಬಂದ ಹಣಕ್ಕೆ ಸಂಬಂಧಪಟ್ಟಂತೆ, ವಿದ್ಯಾಸಂಸ್ಥೆಗೆ ಸೇರಿದ ಜಮೀನುಗಳಿಂದ ಉತ್ಪನ್ನವಾದ ಪದಾರ್ಥಗಳ ಮಾರಾಟ ಬೆಲೆಗೆ ಸಂಬಂಧಪಟ್ಟಂತೆ ಮತ್ತು ಶಾಲಾ ವಾಹನ ಶುಲ್ಕ ಸಂಗ್ರಹಣೆಗೆ ಸಂಬಂಧಪಟ್ಟಂತೆ ಒಟ್ಟು ರೂ.15,88,212/-ಗಳನ್ನು ಸಂಸ್ಥೆಗೆ ಕಟ್ಟದೆ ತನ್ನ ಸ್ವಂತಕ್ಕೆ ಬಳಸಿಕೊಂಡು ದುರ್ಬಳಕೆ ಮಾಡಿಕೊಂಡು ಅಪರಾಧಿಕ ನಂಬಿಕೆ ದ್ರೋಹ ಎಸಗಿ ಭಾರತೀಯ ದಂಡ ಸಂಹಿತೆ ಕಲಂ 406ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಆರೋಪಿಯಾದ ನೀನು ಮಿಳಿಂದ ವಿದ್ಯಾಸಂಸ್ಥೆಯ ಧರ್ಮದರ್ಶಿಯಾಗಿದ್ದ ಮೇಲ್ಕಾಣಿಸಿದ ಅವಧಿಯಲ್ಲಿ ಸಂಸ್ಥೆಗೆ ಸೇರಿದ ಹಣಕ್ಕೆ ಸಂಬಂಧಪಟ್ಟಂತೆ ನಕಲಿ ರಶೀದಿಗಳನ್ನು ಸೃಷ್ಟಿಸಿ ಅವುಗಳಲ್ಲಿ ನಕಲಿ ಸಹಿ ಮಾಡಿ ಸಂಸ್ಥೆಯ ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ದುರ್ಬಳಕೆ ಮಾಡಿಕೊಂಡು ಭಾರತೀಯ ದಂಡ ಸಂಹಿತೆ ಕಲಂ 463ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಆರೋಪಿಯಾದ ನೀನು ಮಿಳಿಂದ ವಿದ್ಯಾಸಂಸ್ಥೆಯ ಧರ್ಮದರ್ಶಿ ಯಾಗಿದ್ದ ಮೇಲ್ಕಾಣಿಸಿದ ಅವಧಿಯಲ್ಲಿ ಸಂಸ್ಥೆಯ ಹಣವನ್ನು ದುರ್ಬಳಕೆ ಮಾಡುವ ಮತ್ತು ಸಂಸ್ಥೆಗೆ ಮೋಸ ಮಾಡುವ ಉದ್ದೇಶದಿಂದ ನಕಲಿ ದಾಖಲಾತಿಗಳನ್ನು ಮತ್ತು ಸುಳ್ಳು ಸಹಿ ಮಾಡಿ ಸೃಷ್ಟಿಸಿ ದುರ್ಬಳಕೆ ಮಾಡಿಕೊಂಡು ಭಾರತೀಯ ದಂಡ ಸಂಹಿತೆ ಕಲಂ 468ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರಿ.

ಕೊನೆಯದಾಗಿ ಆರೋಪಿಯಾದ ನೀನು ಮಿಳಿಂದ ವಿದ್ಯಾಸಂಸ್ಥೆಯ ಧರ್ಮದರ್ಶಿಯಾಗಿದ್ದ ಮೇಲ್ಕಾಣಿಸಿದ ಅವಧಿಯಲ್ಲಿ ಸಂಸ್ಥೆಯ ಧರ್ಮದರ್ಶಿಯವರ ಸಹಿಯನ್ನು ನಕಲಿ ಮಾಡಿ ಸೃಷ್ಟಿಸಿಕೊಂಡು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಅವುಗಳನ್ನು ನೈಜ ದಾಖಲಾತಿಗಳು ಎಂದು ನಂಬಿಸಿ ಬಳಸಿಕೊಂಡು ಸಂಸ್ಥೆಯ ಹಣವನ್ನು ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ಭಾರತೀಯ ದಂಡ ಸಂಹಿತೆ ಕಲಂ 471ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುತ್ತೀರಿ.

ಮತ್ತು ನಾನು ಈ ಮೂಲಕ ಮೇಲ್ಕಂಡ ಆರೋಪಗಳ ಮೇಲೆ ವಿಚಾರಣೆ ಮಾಡುತ್ತೇನೆ ಎಂದು ನಿಮಗೆ ನಿರ್ದೇಶಿಸುವುದು.

26/4/18

ದಿನಾಂಕಃ 26-04-2018

ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ,
ಪಿರಿಯಾಪಟ್ಟಣ.